# ಕರ್ನಾಟಕ ವಿಧಾನ ಪರಿಷತ್ತು

1. ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಎನ್.ಎಸ್.ಬೋಸ್‌ರಾಜು
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 95
3. ಉತ್ತರಿಸಬೇಕಾದ ದಿನಾಂಕ : 09.07.2018
4. ಉತ್ತರಿಸುವ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ನಗರದಲ್ಲಿರುವ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು: | ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೊದಲನೇ ಹಂತದಲ್ಲಿ Cardiology, Urology, Plastic Surgery, Medical Gastroenterology, Paediatric Surgery, Facio Maxillary Surgery, Anaesthesiology, Dialysis ವಿಭಾಗಗಳನ್ನು Cath Lab, Echo, TMT, Dialysis 10, Ventillators, Syringe pumps, ECG machines, Pulse oximeter, 5 para multimeter monitors, Under water cutting cautery, ETC-02 machines, Infusions pumps, Radiant Warmers ಸೌಲಭ್ಯಗಳೊಂದಿಗೆ ಕಾರ್ಯಾರಂಭಗೊಳಿಸಲಾಗಿದ್ದು, ಈ ವಿಭಾಗಗಳಿಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಒದಗಿಸಲಾಗಿದೆ.<br><br>ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಎರಡನೇ ಹಂತದಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದ್ದು, ವಿವಿಧ ವಿಭಾಗಗಳಿಗೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಹಾಗೂ ಮಾಡ್ಯುಲರ್ ಓಟಿ ನಿರ್ಮಾಣ, ಐ.ಸಿ.ಯು., ಲ್ಯಾಂಡ್ ಸ್ಕೇಪಿಂಗ್, ವಾರ್ಡ್‌ಗಳ ನವೀಕರಣ, ಎ.ಸಿ. ಕೂಲರ್‌ಗಳನ್ನು ಅಳವಡಿಸುವುದು, ಜನರೇಟರ್ ಅಳವಡಿಸುವುದು, ಆಂಬುಲೆನ್ಸ್ ಖರೀದಿ, ಸಿಬ್ಬಂದಿಗಳ ವಸತಿ ಗೃಹ ನಿರ್ಮಾಣ, ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳು, ಲಿಫ್ಟ್‌ಗಳನ್ನು ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| ಆ) | ಡಾ:ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ರಾಯಚೂರು ಜಿಲ್ಲೆಯಲ್ಲಿನ ಸದರಿ ಆಸ್ಪತ್ರೆಯ ಸುಧಾರಣೆಗಳಿಗಾಗಿ ಹೆಚ್ಚಿನ ಅನುದಾನ ನೀಡಿ ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದೇ: | ರಾಯಚೂರಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು 2ನೇ ಹಂತದಲ್ಲಿ ರೂ.35.00 ಕೋಟಿಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡಲಾಗಿದ್ದು, ಈಗಾಗಲೇ ರೂ.15.13 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. |

ಇ) ಸದರಿ ಆಸ್ಪತ್ರೆಗೆ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು; ಪಸ್ತುತ ಖಾಲಿ ಇರುವ ಹುದ್ದೆಗಳೆಷ್ಟು; (ವಿವರಗಳನ್ನು ನೀಡುವುದು)

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಟ್ಟು ಮಂಜೂರಾದ ಮತ್ತು ಖಾಲಿಯಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಹುದ್ದೆಯ ಹೆಸರು | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|---|
| 1 | ನಿರ್ದೇಶಕರು | 01 | – | 01 |
| 2 | ಪ್ರಾಧ್ಯಾಪಕರು | 10 | 01 | 09 |
| 3 | ಸಹ ಪ್ರಾಧ್ಯಾಪಕರು | 06 | 01 | 05 |
| 4 | ಸಹಾಯಕ ಪ್ರಾಧ್ಯಾಪಕರು | 18 | 07 | 11 |
| 5 | ಹಿರಿಯ ಸ್ಥಾನಿಕ ವೈದ್ಯರು | 12 | – | 12 |
| 6 | ಕಿರಿಯ ಸ್ಥಾನಿಕ ವೈದ್ಯರು | 12 | – | 12 |
| 7 | ಶುಶ್ರೂಷಕರ ಅಧೀಕ್ಷಕರು | 02 | – | 02 |
| 8 | ಸಹಾಯಕ ಆಡಳಿತ ಅಧಿಕಾರಿ | 01 | – | 01 |
| 9 | ಆರ್ಥಿಕ ಸಲಹೆಗಾರರು | 01 | – | 01 |
| 10 | ಸಹಾಯಕ ಲೆಕ್ಕಾಧಿಕಾರಿ | 01 | – | 01 |
| 11 | ಕಛೇರಿ ಅಧೀಕ್ಷಕರು | 01 | – | 01 |
| 12 | ಶುಶ್ರೂಷಕರು | 61 | 24 | 37 |
| 13 | ಗ್ರೂಪ್ 'ಸಿ' | 39 | 39 | – |
| 14 | ಗ್ರೂಪ್ 'ಡಿ' | 35 | 35 | – |
| | ಒಟ್ಟು | 200 | 107 | 93 |

ಈ) ಸದರಿ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕಾಲ ಕಾಲಕ್ಕೆ ನೇರ ಸಂದರ್ಶನಗಳನ್ನು ಕರೆಯಲಾಗುತ್ತಿದೆ.

ಖಾಲಿ ಇರುವ ಶುಶ್ರೂಷಕ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ಗ್ರೂಪ್ 'ಸಿ' ವೃಂದದ ಹಾಗೂ ಗ್ರೂಪ್ 'ಡಿ' ವೃಂದದ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ರೋಗಿಗಳಿಗೆ ಸಕಾಲದಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ.

**ಆಕುಕ 135 ಎಂಎಂಇ 2018**

(ಡಿ.ಕೆ. ಶಿವಕುಮಾರ)
ವೈದ್ಯಕೀಯ ಶಿಕ್ಷಣ ಸಚಿವರು